ರಾಜ್ಯದ ಉಪನೋಂದಣಾಧಿಕಾರಿಗಳ ಬಗ್ಗೆ

೮೯(೧೪೪) ಶ್ರೀ ಗೋಪಾಲ್ ಮುಕುಂದ ಕಾನಡೆ (ಪಿರ್ಸಿ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ರಾಜ್ಯದಲ್ಲಿರುವ ಒಟ್ಟು ಉಪನೊಂದಣಾಧಿಕಾರಿಗಳೆಷ್ಟು ?

ಆ) ನೊಂದಣಿ ಇಲಾಖೆಯಿಂದ ಸರ್ಕಾರಕ್ಕೆ ವರ್ಷವೊಂದಕ್ಕೆ ಬರುವ ಆದಾಯವೆಷ್ಟು ?

ಇ) ನೊಂದಣಿ ಅಧಿಕಾರಿಗಳಿಗೆ ವಸತಿ, ವಗೈರೆ ಸವಲತ್ತುಗಳನ್ನು ಸರ್ಕಾರದವರು ಒದಗಿಸಿದ್ದಾರೆಯೆ ?

ಈ) ಉಪನೊಂದಣಾಧಿಕಾರಿಗಳು ಕಛೇರಿ ವೇಳೆಯಲ್ಲಿ ಐವತ್ತು ರೂಪಾಯಿಗಳಿಗಿಂತ ಹೆಚ್ಚಿನ ಹಣ ಹೊಂದಿರಬಾರದೆಂಬ ನಿಯಮವಿದೆಯೆ ?

ಉ) ಹಾಗಿದ್ದಲ್ಲಿ ಉಳಿದ ಸರ್ಕಾರಿ ಅಧಿಕಾರಿಗಳಿಗೆ ಈ ನಿಯಮ ಏಕೆ ಅನ್ವಯವಾಗುವುದಿಲ್ಲ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ೧೯೮

ಆ) ಸರಾಸರಿ ರೂ. ೫೧.೫೫ ಕೋಟಿ.

ಇ) ಇಲ್ಲ.

ಈ) ಸುತ್ತೋಲೆಯ ಮುಖಾಂತರ ಆದೇಶ ಹೊರಡಿಸಲಾಗಿದೆ.

ಉ) ಕಂದಾಯ ಇಲಾಖೆಯ ಅಧೀನದಲ್ಲಿ ಬರುವ ಇಲಾಖೆಗಳ ಇತರೆ ಸರಕಾರಿ ಅಧಿಕಾರಿಗಳಿಗೆ ಈ ಆದೇಶಗಳನ್ನು ಅನ್ವಯಿಸುವ ಅವಶ್ಯಕತೆ ಕಂಡು ಬರದಿದ್ದರಿಂದ ಆದನ್ನು ಅನ್ವಯ ಮಾಡಿಲ್ಲ.

ಅಂತರಜಾತಿ ವಿವಾಹ ಪ್ರೋತ್ಸಾಹದ ಬಗ್ಗೆ

೯೧(೩೮೪) (ಇ) ಶ್ರೀ ಡಿ. ಟಿ. ಜಯಕುಮಾರ (ನಂಜನಗೂಡು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ಸರ್ಕಾರವು ಇದುವರೆಗೆ ಎಷ್ಟು ಜನ ಅಂತರಜಾತಿ ವಿವಾಹದವರಿಗೆ ಧನ ಸಹಾಯದ ಪ್ರೋತ್ಸಾಹ ನೀಡಿದೆ.

ಆ) ಈ ಅಂತರ ಜಾತಿ ವಿವಾಹ ಆದವರಿಗೆ ಸರ್ಕಾರಿ ನೌಕರಿಯನ್ನು ಕೊಡಲಾಗುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಆ) ೪೬೫

ಆ) ಅಂತಹ ಯೋಜನೆ ಇರುವುದಿಲ್ಲ.

ಕಲಘಟಗಿ ಹಾಗೂ ಹುಬ್ಬಳ್ಳಿ ತಾಲ್ಲೂಕುಗಳಲ್ಲಿ ಹಿಂದುಳಿದ ವರ್ಗದವರಿಗೆ ವಿದ್ಯಾರ್ಥಿ ನಿಲಯ ಸ್ಥಾಪನೆ ಬಗ್ಗೆ

೯೨(೪೪೨) (ಇ) ಶ್ರೀ ಪಿ. ಸಿ. ಸಿದ್ದನಗೌಡರ (ಕಲಘಟಗಿ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೆ.—

ಕಲಘಟಗಿ ಹಾಗೂ ಹುಬ್ಬಳ್ಳಿ ತಾಲ್ಲೂಕುಗಳಲ್ಲಿಯ ಪ್ರತಿ ಪ್ರೌಢಶಾಲೆಗಳು ಇರುವಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿ ವಸತಿ ಗೃಹಗಳನ್ನು ಸ್ಥಾಪಿಸಲು ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಕಲಘಟಗಿಯಲ್ಲಿ ಒಂದು ಮತ್ತು ಹುಬ್ಬಳ್ಳಿ ತಾಲ್ಲೂಕಿನಲ್ಲಿ ೬ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಹಾಗೂ ಒಂದು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿವೆ. ಹುಬ್ಬಳ್ಳಿ ತಾಲ್ಲೂಕಿನ ಬಿ. ಅರಳಿಕಟ್ಟಿ ಗ್ರಾಮದಲ್ಲಿ ಹಿಂದುಳಿದ ವರ್ಗದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಕಲಘಟಗಿ ತಾಲ್ಲೂಕಿನ ಯಾವುದೇ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಕುರಿತು ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸುಗಳು ಬಂದಿರುವುದಿಲ್ಲ.

ವೃದ್ಧಾಪ್ಯ ವೇತನ, ಅಂಗವಿಕಲ ಹಾಗೂ ವಿಧವಾ ಮಾಸಾಶನಗಳನ್ನು ಕುರಿತು

೯೩. (೨೧೧) ರಾಮನಾರಾಯಣ ನಾಯಕ್ (ಭಟ್ಕಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಅನುಕ್ರಮವಾಗಿ ವಿಧವಾ ವೇತನ, ಅಂಗವಿಕಲರ ವೇತನ ಹಾಗೂ ವಯಸ್ಕರ ವೇತನ ಪಡೆಯುತ್ತಿರುವವರ ಸಂಖ್ಯೆ ಎಷ್ಟು ?

ಆ) ಅನುಕ್ರಮವಾಗಿ ಪ್ರತಿ ತಿಂಗಳಿಗೆ ಅಂಗವಿಕಲರ, ವಿಧವಾ ಹಾಗೂ ವಯಸ್ಕರ ವೇತನ ಕೋಸ್ಕರ ರಾಜ್ಯದ ಬೊಕ್ಕಸಕ್ಕೆ ತಗಲತಕ್ಕ ವೆಚ್ಚ ಎಷ್ಟು ?

ಇ) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಅನುಕ್ರಮವಾಗಿ ವಿಧವಾ ವೇತನ, ಅಂಗವಿಕಲರ ವೇತನ ಹಾಗೂ ವಯಸ್ಕರ ವೇತನ ಪಡೆಯುತ್ತಿರುವವರ ಸಂಖ್ಯೆ ಎಷ್ಟು ?

ಈ) ಸದರಿ ಎರಡು ತಾಲ್ಲೂಕುಗಳಲ್ಲಿ ೧೯೮೬ನೇ ವರ್ಷಕ್ಕೆ ಮೇಲೆ ಹೇಳಿದ ವೇತನ ಕೇಳಿ ಬಂದ ಅರ್ಜಿಗಳಲ್ಲಿ ಎಷ್ಟಕ್ಕೆ ವೇತನ ನಿರಾಕರಿಸಲಾಗಿದೆ ?

ಉ) ಕಳೆದ ೩ ತಿಂಗಳಿಂದ ಮೇಲೆ ಹೇಳಿದ ವೇತನಗಳನ್ನು ಭಟ್ಕಳ ಹೊನ್ನಾವರಗಳಲ್ಲಿ ಸರಿಯಾಗಿ ಪೂರೈಸಲಾಗುತ್ತಿದೆಯೆ ? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ವಿಧವಾ ವೇತನ — ೨,೯೨,೨೮೨
ಅಂಗವಿಕಲ ವೇತನ — ೧,೮೫೫,೨೩೬
ವಯಸ್ಕರ ವೇತನ
(ವೃದ್ಧಾಪ್ಯವೇತನ) — ೫,೩೫೫,೬೨೯

ಆ) ರಾಜ್ಯದ ಬೊಕ್ಕಸಕ್ಕೆ ತಗಲುತ್ತಿರುವ ವೆಚ್ಚ.
ಅಂಗವಿಕಲ ವೇತನ — ೯೫,೩೯,೬೫೪-೦೦
ವಿಧವಾ ವೇತನ — ೧,೫೦,೫೨,೫೮೬-೦೦
ವಯಸ್ಕರ ವೇತನ
(ವೃದ್ಧಾಪ್ಯ ವೇತನ) — ರೂ. ೨,೭೫,೮೪,೮೯೪-೦೦

ಇ)

	ಭಟ್ಕಳ ತಾಲ್ಲೂಕು	ಹೊನ್ನಾವರ ತಾಲ್ಲೂಕು
ವಿಧವಾ ವೇತನ	೫೭೫	೧೧೩೯
ಅಂಗವಿಕಲ ವೇತನ	೫೨೩	೫೭೮
ವಯಸ್ಕರ ವೇತನ (ವೃದ್ಧಾಪ್ಯ ವೇತನ)	೬೫೦	೮೮೬